# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಅಭಿಯಂತರರ ಕಛೇರಿ, ವಾರ್ಡ್ ಸಂಖ್ಯೆ 19, ಸಂಜಯನಗರ. ಬೆಂಗಳೂರು.

ದಿನಾಂಕ:13-09-2021

ಸಂಖ್ಯೆ: ಸ.ಅ/ವಾ-19/ಪಿ.ಆರ್/01/2021-22

**ವಾರ್ಡ್ ಸಮಿತಿ ಸಭೆಯ ನಡವಳಿಗಳು**

**ವಿಷಯ:** ಮಾನ್ಯ ಆಯುಕ್ತರು ಬಿ.ಬಿ.ಎಂ.ಪಿ ರವರ ಆದೇಶ ಸಂಖ್ಯೆ:ಬಿ12(5)ಪಿ.ಆರ್/35/ 2020-21 ದಿನಾಂಕ: 21-09-2020. ರವರ ಆದೇಶದಂತೆ ದಿನಾಂಕ: 07-09-2021 ರಂದು ವಾರ್ಡ್ ನಂ:19 ಸಂಜಯನಗರ ಸೆಂಟ್ರಲ್ ಎಕ್ಸೈಜ್ ಲೇಔಟ್‌ನಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು.

**::ಸಭೆಗೆ ಹಾಜರಾಗಿದ್ದವರ ವಿವರಗಳು::**

| ಕ್ರ.ಸಂ | ಹೆಸರು ಶ್ರೀಮತಿ/ಶ್ರೀ | ಪದನಾಮ | ಷರಾ |
|---|---|---|---|
| 1. | ಶ್ರೀಮತಿ ತುಳಸಿ ಮದ್ದಾನಿ (ಐ.ಎ.ಎಸ್) ವಿಶೇಷ ಆಯುಕ್ತರು ( ಹಣಕಾಸು) | ವಾರ್ಡ್ ಸಮಿತಿ ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳು | |
| 2. | ಸಂತೋಷ್‌ಕುಮಾರ್.ಟಿ | ಸದಸ್ಯ ಕಾರ್ಯದರ್ಶಿ ವಾಡ್ ನಂ: 19 | |
| 3. | ಗಣೇಶ್.ಕೆ.ಎಂ | ಕಿರಿಯ ಆರೋಗ್ಯ ಪರಿವೀಕ್ಷಕರು ವಾಡ್ ನಂ: 19 | |
| 4. | ಸೌಮ್ಯ | ಸಹಾಯಕ ಅಭಿಯಂತರರು ಬಿ.ಡಬ್ಲ್ಯೂ.ಎಸ್.ಎಸ್.ಬಿ ಬೆಂಗಳೂರು | |
| 5. | ಶ್ರೀ. ರಮೇಶ್ | ಸಂಜಯನಗರ ಪೊಲೀಸ್ ಠಾಣೆ | |

ವಾರ್ಡ್ ಕಾರ್ಯದರ್ಶಿಗಳಾದ ಶ್ರೀ ಸಂತೋಷ್‌ಕುಮಾರ್ ಟಿ ರವರು ಸಭೆಗೆ ಹಾಜರಾದ ಅಧ್ಯಕ್ಷರು, ಹಾಗೂ ನೋಡಲ್ ಅಧಿಕಾರಿಗಳಾದ ಶ್ರೀಮತಿ ತುಳಸಿ ಮದ್ದಾನಿ ಐ.ಎ.ಎಸ್ ರವರಿಗೆ ಮತ್ತು ಸಭೆಯಲ್ಲಿ ಸೇರಿದ ಸಾರ್ವಜನಿಕರಿಗೆ ಸ್ವಾಗತ ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು.

1. ಸಂಜಯನಗರದಲ್ಲಿ ಇರುವ ಬಿ.ಡಬ್ಲ್ಯೂ.ಎಸ್.ಎಸ್.ಬಿ ಗೆ ಸಂಬಂಧಿಸಿದ ಕಾಮಗಾರಿಗಳ ಅಂದಾಜು ಪಟ್ಟಿಯನ್ನು ತಯಾರಿಸಿ ಸಲ್ಲಿಸಿರುವ ಬಗ್ಗೆ ಶ್ರೀಮತಿ ಸೌಮ್ಯ ಸಹಾಯಕ ಅಭಿಯಂತರರನ್ನು ಪ್ರಶ್ನೆ ಮಾಡಿದರು ಆಗ ಸಹಾಯಕ ಅಭಿಯಂತರರಾದ ಸೌಮ್ಯ ರವರು ಈಗಾಗಲೇ ಸದರಿ ಕಾಮಗಾರಿಗಳ ಅಂದಾಜು ಪಟ್ಟಿಯನ್ನು ಸಲ್ಲಿಸಲಾಗಿದೆ ಎಂಬ ಮಾಹಿತಿಗಳನ್ನು ಸಭೆಗೆ ನೀಡಿದರು.
2. ಸಂಜಯನಗರದಲ್ಲಿರುವ ಬೀದಿ ದೀಪಗಳ ದುರಸ್ಥಿಯ ಬಗ್ಗೆ ಕ್ರಮವಹಿಸಲು ನೋಡಲ್ ಅಧಿಕಾರಿಗಳು ಸೂಚಿಸಿರುತ್ತಾರೆ.
3. ವಾರ್ಡ್ ಮುಖ್ಯರಸ್ತೆಗಳಾದ ಸಂಜಯನಗರ ಮುಖ್ಯರಸ್ತೆ ಹಾಗೂ ಭೂಪಸಂದ್ರ ಮುಖ್ಯರಸ್ತೆಯ ಪಾದಚಾರಿ ಮಾರ್ಗದಲ್ಲಿ ಅನಧಿಕೃತವಾಗಿ ಹಣ್ಣಿನ ಅಂಗಡಿ ಹಾಗೂ ತಳ್ಳುವ ಗಾಡಿಯನ್ನು ನಿಲ್ಲಿಸಿ ವ್ಯಾಪಾರ ವಹಿವಾಟು ಮಾಡುತ್ತಿರುವುದರಿಂದ ಪಾದಚಾರಿಗಳಿಗೆ ತುಂಬಾ ತೊಂದರೆ ಉಂಟಾಗುತ್ತಿರುವುದರಿಂದ ಈ ಬಗ್ಗೆ ಸಂಜಯನಗರ ಪೊಲೀಸ್ ಠಾಣೆ ಹಾಗೂ ಆರ್.ಟಿ ನಗರ ಟ್ರಾಫಿಕ್ ಪೊಲೀಸ್ ಠಾಣೆ ಸೂಕ್ತ ಕ್ರಮವಹಿಸಲು ವಾರ್ಡ್ ನೋಡಲ್ ಅಧಿಕಾರಿಗಳು ಸೂಚಿಸಿರುತ್ತಾರೆ.
4. ವಾರ್ಡ್ ಮುಖ್ಯರಸ್ತೆಗಳಾದ ಸಂಜಯನಗರ ಮುಖ್ಯರಸ್ತೆ ಭೂಪಸಂದ್ರ ಮುಖ್ಯರಸ್ತೆ ಹಾಗೂ ಕಲ್ಪನಾ ಚಾವ್ಲ ರಸ್ತೆಯ ಬದಿಗಳಲ್ಲಿ ಅನಧಿಕೃತವಾಗಿ ವಾಹನಗಳನ್ನು ನಿಲುಗಡೆ ಮಾಡಿರುವ ಬಗ್ಗೆ ಹಾಗೂ ನಿಲುಗಡೆ ಆಗಿರುವ ವಾಹನಗಳನ್ನು ತೆರವುಗೊಳಿಸಲು ಆರ್.ಟಿ ನಗರ ಟ್ರಾಫಿಕ್ ಪೊಲೀಸ್ ಠಾಣೆ ರವರು ಸೂಕ್ತ ಕ್ರಮ ವಹಿಸಲು ವಾರ್ಡ್ ನೋಡಲ್ ಅಧಿಕಾರಿಗಳು ಸೂಚಿಸಿರುತ್ತಾರೆ.

Scanned By Scanner Go

5. ರವಿಚಂದ್ರ ವಾರ್ಡ್ ಸಮಿತಿ ಸದಸ್ಯರು ವಾರ್ಡ್‌ನ ಗುಂಡಿಗಳನ್ನು ಮುಚ್ಚುವ ಬಗ್ಗೆ ಸಹಾಯಕ ಅಭಿಯಂತರರಾದ ಸಂತೋಷ್‌ಕುಮಾರ್.ಟಿ ರವರಿಗೆ ಕೇಳಿದಾಗ ಸದರಿ ವಿಷಯಕ್ಕೆ ಸಂಬಂಧಪಟ್ಟಂತೆ ಈಗಾಗಲೇ ಕ್ರಮವಹಿಸಲಾಗಿದೆ ಎಂಬ ಮಾಹಿತಿಯನ್ನು ನೀಡಿರುತ್ತಾರೆ.

ವಾರ್ಡ್‌ನ ಅಧ್ಯಕ್ಷಕರು ಮಾತನಾಡುತ್ತಾ ಈ ಮೇಲಿನ ಎಲ್ಲಾ ಅಂಶಗಳನ್ನು ಕೂಡಲೇ ಬಗೆಹರಿಸುವಂತೆ ವಾರ್ಡ್ ಕಾರ್ಯದರ್ಶಿಗಳಿಗೆ ತಿಳಿಸುತ್ತಾ ಮತ್ತು ಸಭೆಯಲ್ಲಿ ಹಾಜರಿದ್ದ ಎಲ್ಲಾ ಸಾರ್ವಜನಿಕರಿಗೆ ವಂದನೆಗಳನ್ನು ತಿಳಿಸುತ್ತಾ ಈ ಸಭೆಯನ್ನು ಮುಕ್ತಾಯಗೊಳಿಸಿದರು.

T. Santhosh

ವಾರ್ಡ್ ಸದಸ್ಯ ಕಾರ್ಯದರ್ಶಿಗಳು
ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ. 19, ಸಂಜಯನಗರ

ಅಧ್ಯಕ್ಷರು 13/9/24
ಹಾಗೂ ನೋಡಲ್ ಅಧಿಕಾರಿಗಳು
ವಾರ್ಡ್ ಸಂಖ್ಯೆ.19, ಸಂಜಯನಗರ

<u>ಪ್ರತಿಯನ್ನು:-</u>

1. ಮಾನ್ಯ ಜಂಟಿ ಆಯುಕ್ತರು (ಪೂರ್ವ) ಬಿ.ಬಿ.ಎಂ.ಪಿ ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ವಾರ್ಡ್ ಸಮಿತಿಯ ಅಧ್ಯಕ್ಷರ ಮಾಹಿತಿಗಾಗಿ ಕಳುಹಿಸಿದೆ.
3. ವಾರ್ಡ್ ಸಮಿತಿಯ ಸದಸ್ಯರುಗಳ ಮಾಹಿತಿಗಾಗಿ ಕಳುಹಿಸಿದೆ.
4. ಕಛೇರಿ ಪ್ರತಿ.

Scanned By Scanner Go